# ಸೇವೆಯ ಮೂರ್ತ ಸ್ವರೂಪ ಅಳಸಿಂಗ ಪೆರುಮಾಳ್

**ಸ್ವಾಮಿ ಶಾಂತಿವ್ರತಾನಂದ**

ಸ್ವಾಮಿ ವಿವೇಕಾನಂದರ ಜಗದ್ಧಿತದ ಕಾರ್ಯದಲ್ಲಿ ಸಹಾಯಕನೂ, ನಿಷ್ಠಾವಂತ ಶಿಷ್ಯನೂ ಆಗಿದ್ದು, ಅವರ ಕಾರ್ಯಕ್ಕಾಗಿ ಅವಿರತವಾಗಿ ದುಡಿದ ಅಳಸಿಂಗ ಪರುಮಾಳ್ ಅವರ ಜೀವನವೇ ಒಂದು ಸಮರ್ಪಣೆಯ ಯಶೋಗಾಥೆ. ರಾಮಕೃಷ್ಣ ಭಾವಧಾರೆ ದಕ್ಷಿಣ ಭಾರತದಲ್ಲಿ ಹೆಚ್ಚು ಪಸರಿಸುವಂತೆ ಮಾಡುವಲ್ಲಿ ಇವರ ಪಾತ್ರ ಹಿರಿದು. ಈ ವಿಚಾರಗಳ ಬಗ್ಗೆ ವಿವರಿಸಿರುವ ಲೇಖಕರು ಉತ್ತಮ ವಾಗ್ಮಿಗಳು ಮತ್ತು ಲೇಖಕರು. ಪ್ರಸ್ತುತ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಭಾರತದ ಆದರ್ಶಗಳು ಸೇವೆ ಹಾಗು ತ್ಯಾಗ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಅದನ್ನು ಅಕ್ಷರಶಃ ಪಾಲಿಸಿದವರು ಸ್ವಾಮಿ ವಿವೇಕಾನಂದರ ಶಿಷ್ಯಾಗ್ರೇಸರರಾದ ಶ್ರೀ ಅಳಸಿಂಗ ಪೆರುಮಾಳ್‌ರವರು.

''ಈ ಜಗತ್ತಿನಲ್ಲಿ ಅಳಸಿಂಗರಂತಹ ಇನ್ನೊಬ್ಬ ವ್ಯಕ್ತಿಯನ್ನು ಕಾಣಲು ಸಾಧ್ಯವಿಲ್ಲ. ಅವನು ನಿಸ್ವಾರ್ಥದ ಮೂರ್ತ ಸ್ವರೂಪ. ಶ್ರಮಜೀವಿ ಹಾಗು ಗುರುಗಳಲ್ಲಿ ಸಂಪೂರ್ಣ ಭಕ್ತಿ. ಈ ಭೂಮಿಯಲ್ಲಿ ಅಂತಹ ನಿಷ್ಠೆ ಹಾಗು ವಿನಯತೆ ಮತ್ತು ವಿಧೇಯತೆಗಳನ್ನು ಹೊಂದಿರುವಂತಹ ಶಿಷ್ಯನನ್ನು ಕಾಣುವುದು ಕಷ್ಟಸಾಧ್ಯ'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಸ್ವಾಮಿ ವಿವೇಕಾನಂದರ ಮಾತುಗಳಿಂದ ಅಳಸಿಂಗರ ವ್ಯಕ್ತಿತ್ವದ ಪರಿಚಯ ನಮಗೆ ಸ್ವಲ್ಪ ಮಟ್ಟಿಗೆ ಸಿಗುತ್ತದೆ. ಇವರು ೧೮೬೫ರಲ್ಲಿ ಚಿಕ್ಕಮಗಳೂರಿನಲ್ಲಿ ಸಂಪ್ರದಾಯಸ್ಥ ಐಯ್ಯಂಗಾರ್ ಮನೆತನದಲ್ಲಿ ಜನಿಸಿದರು.



## ಶಿಕ್ಷಣ ಕ್ಷೇತ್ರ

೧೮೮೦ರ ದಶಕದಲ್ಲಿ ಕುಂಭಕೋಣಂ ಶಾಲೆಯೊಂದರಲ್ಲಿ ಅಧ್ಯಾಪಕರಾಗಿ ಅಳಸಿಂಗರು ತಮ್ಮ ಸೇವೆಯನ್ನು ಪ್ರಾರಂಭಿಸಿದರು. ೧೮೮೭ರಲ್ಲಿ ಚಿದಂಬರಂನ ಪಾಚಿಯಪ್ಪ ಶಾಲೆಗೆ ಸೇರಿದರು. ಅಲ್ಲಿ ಅವರ ನಿಷ್ಠೆ, ಕರ್ತವ್ಯ ಪ್ರಜ್ಞೆಗೆ ಹಾಗೂ ಬುದ್ಧಿಮತ್ತೆಗೆ ಪ್ರಸಿದ್ಧರಾದರು. ಅವರ ಸೇವೆಯನ್ನು ಕಂಡು ಮದ್ರಾಸಿನಲ್ಲಿದ್ದ ಪಾಚಿಯಪ್ಪ ಶಾಲೆಯ ವ್ಯವಸ್ಥಾಪಕ ಮಂಡಲಿಯು ಅಳಸಿಂಗರನ್ನು ಪ್ರಧಾನ ಶಾಲೆಯ ಮುಖ್ಯೋಪಾಧ್ಯಾಯರಾಗಿ ನಿಯುಕ್ತಿಗೊಳಿಸಿದರು. ಮುಂದೆ ಪಾಚಿಯಪ್ಪ ಕಾಲೇಜಿನ ಭೌತಶಾಸ್ತ್ರದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. ತಮ್ಮ ೨೬ನೇ ವಯಸ್ಸಿನಲ್ಲಿ ಅಳಸಿಂಗರು ಶಾಲೆಯ ಮುಖ್ಯೋಪಾಧ್ಯಾಯರಾದರು. ಇದು ಅವರ ದಕ್ಷತೆಯನ್ನು ಸೂಚಿಸುತ್ತದೆ. ಆದರೆ ಅವರು ಇತರೆ ಹಿರಿಯ ಅಧ್ಯಾಪಕ ಸಹೋದ್ಯೋಗಿ ಮಿತ್ರರೊಂದಿಗೆ ತುಂಬಾ ಪ್ರೀತಿ, ವಿನಯಗಳಿಂದ ನಡೆದುಕೊಳ್ಳುತ್ತಿದ್ದರು. ಅವರು ಎಂದೂ ಮುಖ್ಯೋಪಾಧ್ಯಾಯರು ಎಂಬ ಅಹಂಕಾರದಿಂದ ನಡೆದುಕೊಳ್ಳಲಿಲ್ಲ. ಇವರ ಅಮೋಘ ಸೇವೆ ಹಾಗೂ ಸತತ ಪರಿಶ್ರಮದಿಂದ ಪಾಚಿಯಪ್ಪ ಸಂಸ್ಥೆ ಮುಂದುವರಿದು, ಜನರ ಮನ್ನಣೆಗೆ ಪಾತ್ರವಾಯಿತು. 'ಭಾರತೀಯ ಯುವಕರ ಸಂಸ್ಥೆ' ಎಂಬ ನೂತನ ಸಂಸ್ಥೆಯನ್ನು ಅನ್ನಿ ಬೆಸೆಂಟ್ ಪ್ರಾರಂಭಿಸುವುದಕ್ಕಿಂತ ಮುಂಚೆಯೇ ಅಳಸಿಂಗರು ಪ್ರಾರಂಭಿಸಿದ್ದರು. ಅಲ್ಲಿ ಪ್ರತಿ ವಾರ ವಿದ್ವತ್‌ಪೂರ್ಣ ವ್ಯಕ್ತಿಗಳಿಂದ ಎರಡು ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಇದರಿಂದ ಅನೇಕ ಯುವಕರಿಗೆ ಬಹಳಷ್ಟು ವಿಷಯಗಳನ್ನು ತಿಳಿಯಲು ಸಾಧ್ಯವಾಯಿತು. ಅವರ ಜ್ಞಾನ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು.

ಇವರು ಇತರರಂತೆ ಶಾಲೆಯಲ್ಲಿ ಬರೀ ಪಾಠಗಳನ್ನು ಮಾಡುವುದರಲ್ಲಿ ಸುಮ್ಮನಾಗಲಿಲ್ಲ. ಸಾಮಾನ್ಯ ಜನರಿಗೂ ಶಿಕ್ಷಣ ದೊರೆಯ

ಬೇಕೆಂದು ಬಹಳಷ್ಟು ಶ್ರಮಿಸಿದರು. ಇವರೇ ಬಡವರು. ಆದರೂ ಬಹಳಷ್ಟು ಬಡ ವಿದ್ಯಾರ್ಥಿಗಳಿಗೆ ಅವಶ್ಯ ಬಂದಾಗ ಹಣದ ನೆರವನ್ನು ನೀಡುತ್ತಿದ್ದರು. ಜನರು ಕಷ್ಟದಲ್ಲಿದ್ದಾಗ ಶಕ್ತಿಮೀರಿ ಸಹಾಯ ಮಾಡುತ್ತಿದ್ದರು. ಈ ರೀತಿಯಾಗಿ ಅನೇಕರಿಗೆ ಸಹಾಯ ಮಾಡುತ್ತಿದ್ದುದರಿಂದ, ಅವರಿಗೆ ಬಂದ ಸಂಬಳ ಅನೇಕ ಬಾರಿ ಸಮಾಜಕ್ಕೆ ವಿನಿಯೋಗವಾಗಿಬಿಡುತ್ತಿತ್ತು. ಇದರಿಂದ ಅವರು, ಅವರ ಕುಟುಂಬ ಕೊನೆಯವರೆಗೆ ಬಡವರಾಗಿಯೇ ಉಳಿದರು. ಅಳಸಿಂಗ ಪೆರುಮಾಳರ ಅಕಾಲಿಕ ಮರಣದ ನಂತರ, ಅವರ ಹೆಂಡತಿಗೆ ಮಕ್ಕಳನ್ನು ಪೋಷಿಸುವುದೇ ಕಷ್ಟವಾಯಿತು. ಅವರು ಪಾಚಿಯಪ್ಪ ಕಾಲೇಜಿನ ಟ್ರಸ್ಟಿಗಳ ಬಳಿ ಹಣದ ನೆರವನ್ನು ನೀಡಲು ನಿವೇದಿಸಿಕೊಂಡಿದ್ದರು. ಇದರಿಂದ ಅಳಸಿಂಗರು ತ್ಯಾಗ ಮತ್ತು ಸೇವೆಯ ಮೂರ್ತ ಸ್ವರೂಪರಾಗಿದ್ದರು ಎಂದು ನಮಗೆ ತಿಳಿದುಬರುತ್ತದೆ. ಅವರು ಬಡವರಾಗಿದ್ದರೂ, ಸಮಾಜದಲ್ಲಿ ಅವರನ್ನು ಜನರು ಅತ್ಯಂತ ಗೌರವದಿಂದ ಕಾಣುತ್ತಿದ್ದರು.

### ಚಿಕಾಗೋ ವಿಶ್ವಧರ್ಮ ಸಮ್ಮೇಳನ

೧೮೯೩ರಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಜಯಭೇರಿ ಬಾರಿಸಿರುವ ವಿಷಯ ನಮಗೆಲ್ಲ ತಿಳಿದಿದೆ. ಇದಕ್ಕೆ ಕಾರಣ ಶ್ರೀ ಅಳಸಿಂಗ ಪೆರುಮಾಳ್‌ರವರು. ಆ ಸಮ್ಮೇಳನದ ಅಧ್ಯಕ್ಷರಾದ ಡಾ. ಬರೋಸ್‌ರವರು ಭಾರತದಲ್ಲಿದ್ದ ಡಾ. ಮಿಲ್ಲರ್ ಅವರಿಗೆ ಹಿಂದೂಧರ್ಮವನ್ನು ಪ್ರತಿಪಾದಿಸುವ ಯೋಗ್ಯ ವ್ಯಕ್ತಿಯನ್ನು ಕಳುಹಿಸಿಕೊಡಿ ಎಂದು ಪತ್ರ ಬರೆದಿದ್ದರು. ಡಾ. ಮಿಲ್ಲರ್ ಅವರು ಮದ್ರಾಸಿನ ಯೋಗಿ ಪಾರ್ಥಸಾರಥಿ ಅಯ್ಯಂಗಾರ್ ಅವರಿಗೆ ತಿಳಿಸಿದರು. ಯೋಗಿಯವರ ಅಕ್ಕನ ಮಗನೇ ಅಳಸಿಂಗ ಪೆರುಮಾಳ್. ಯೋಗಿಯ ಮೂಲಕ ವಿಶ್ವಧರ್ಮ ಸಮ್ಮೇಳನದ ಕುರಿತು ತಿಳಿದರು. ವಿಶ್ವಧರ್ಮ ಸಮ್ಮೇಳನಕ್ಕೆ ಹಿಂದೂಧರ್ಮವನ್ನು ಪ್ರತಿನಿಧಿಸಲು ಸೂಕ್ತ ವ್ಯಕ್ತಿಯನ್ನು ಕಳುಹಿಸಬೇಕೆಂಬ ಉತ್ಕಟ ಹಂಬಲ ಅಳಸಿಂಗರದಾಗಿತ್ತು. ತುಂಬಾ ಯೋಚಿಸಿ ಮಹಾಮೇಧಾವಿ, ಶಾಸ್ತ್ರಜ್ಞ, ವಾಗ್ಮಿಗಳೂ ಆದ ಪ್ರೊ. ಎಂ. ರಂಗಚಾರಿಯರ್ ಸೂಕ್ತ ವ್ಯಕ್ತಿ ಎಂದು ಆಲೋಚಿಸಿ ಅವರ ಬಳಿ ಅಳಸಿಂಗರು ಪ್ರಸ್ತಾಪವನ್ನು ಮುಂದಿಟ್ಟರು. ಆದರೆ ರಂಗಾಚಾರಿಯರ್ ತಾವು ಸಮುದ್ರ ಉಲ್ಲಂಘನೆ ಮಾಡುವುದಿಲ್ಲ ಎಂದು ಹೇಳುತ್ತಾ ಪ್ರಸ್ತಾಪವನ್ನು ನಿರಾಕರಿಸಿಬಿಟ್ಟರು. ಭಾರತಕ್ಕೆ, ತನ್ನ ಹಿಂದೂಧರ್ಮವನ್ನು ವಿಶ್ವಮಟ್ಟದಲ್ಲಿ ಪ್ರತಿನಿಧಿಸಲು ಸಿಕ್ಕ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಅಳಸಿಂಗರು ಬಹಳ ದುಃಖಿತರಾದರು. ಹೇಗಾದರೂ ಸರಿ, ನಮ್ಮ ಆರ್ಯ ಧರ್ಮವನ್ನು ಕುರಿತು ಸರಿಯಾಗಿ ಪ್ರತಿಪಾದಿಸುವವರನ್ನು ವಿಶ್ವಧರ್ಮ ಸಮ್ಮೇಳನಕ್ಕೆ ಕಳುಹಿಸಿಕೊಡಬೇಕು ಎಂದು ಬಹಳವಾಗಿ, ಪರಿಪರಿಯಾಗಿ ಯೋಚಿಸಿದರು.

ಅಳಸಿಂಗರ ಪಾವಿತ್ರ್ಯ, ಸತತಪ್ರಯತ್ನ, ದೇಶಭಕ್ತಿಯನ್ನು ಕಂಡು ಭಗವಂತನಿಗೂ ಅಳಸಿಂಗರಿಗೆ ಸಹಾಯವನ್ನು ಮಾಡಬೇಕೆಂದು ಅನ್ನಿಸಿತೊ ಏನೊ! ಅದೇ ಸಮಯದಲ್ಲಿ, ಒಂದು ದಿನ ಅಳಸಿಂಗರ ಕಿರಿಯ ಸಹೋದರನಾದ ಎಂ. ಸಿ. ಕೃಷ್ಣಮಾಚಾರಿಯರ್ ಅವರು ''ಮದ್ರಾಸಿಗೆ ಒಬ್ಬ ಯುವ ಸಂನ್ಯಾಸಿ ಬಂದಿದ್ದಾರೆ. ಅವರು ಮಹಾಮೇಧಾವಿ, ಶಾಸ್ತ್ರಗಳನ್ನು ಅರೆದು ಕುಡಿದಿದ್ದಾರೆ. ಚರಿತ್ರೆಯನ್ನು, ಪ್ರಾಚ್ಯ ಹಾಗು ಪಾಶ್ಚಾತ್ಯ ತತ್ತ್ವಶಾಸ್ತ್ರಗಳನ್ನು ಚೆನ್ನಾಗಿ ಬಲ್ಲರು'' ಎಂದು ತಿಳಿಸಿದರು. 'ಏನು? ಸಂನ್ಯಾಸಿ, ಅದರಲ್ಲೂ ಇಂಗ್ಲೀಷನ್ನು ಚೆನ್ನಾಗಿ ಬಲ್ಲವರು ಅಂದರೇನು? ಆಶ್ಚರ್ಯ! ಅಂತಹವರನ್ನು ನಾನು ನೋಡಲೇಬೇಕು' ಎಂದು ಸ್ನೇಹಿತರೊಂದಿಗೆ ಅದೇ ದಿನ ಅಳಸಿಂಗರು ಸಂನ್ಯಾಸಿಯನ್ನು ಕಾಣಲು ಹೋದರು. ಮೊದಲನೆಯ ಭೇಟಿಯಲ್ಲೇ ಸ್ವಾಮಿ ವಿವೇಕಾನಂದರ ಅಮೋಘ ವ್ಯಕ್ತಿತ್ವ, ಪ್ರಕಾಂಡ ಪಾಂಡಿತ್ಯಕ್ಕೆ ಮಾರುಹೋದರು. ವಿಶ್ವಧರ್ಮ ಸಮ್ಮೇಳನಕ್ಕೆ ತಾನು ಹುಡುಕುತ್ತಿದ್ದ ಅತ್ಯಂತ ಸೂಕ್ತ ವ್ಯಕ್ತಿ ಇವರೇ ಎಂದು ಭಾವಿಸಿದರು. ಭಗವಂತನೇ ಅವರ ಪ್ರಾರ್ಥನೆಗೆ ಮಣಿದು ಈ ಅದ್ಭುತ ಸಂನ್ಯಾಸಿಯನ್ನು ಕಳುಹಿಸಿಕೊಟ್ಟಿದ್ದಾನೆ ಎಂದು ಭಗವಂತನಿಗೆ ಧನ್ಯವಾದಗಳನ್ನು ತಿಳಿಸಿದರು. ನಿಧಾನವಾಗಿ ಸ್ವಾಮೀಜಿಯವರಲ್ಲಿ ತಮ್ಮ ಬಿನ್ನಹವನ್ನು ನಿವೇದಿಸಿಕೊಂಡರು. ಭಗವದಿಚ್ಛೆಯಂತೆ ತಾವು ನಡೆಯುವುದಾಗಿ ಸ್ವಾಮೀಜಿ ತಿಳಿಸಿದರು. ಪುನಃ ಪುನಃ ಅಳಸಿಂಗರು ಸ್ವಾಮೀಜಿಯವರನ್ನು ಕಾಣಲು ಹೋಗುತ್ತಿದ್ದರು. ಅವಕಾಶ ದೊರೆತಾಗಲೆಲ್ಲ ಸ್ವಾಮೀಜಿಯವರು ವಿಶ್ವಧರ್ಮ ಸಮ್ಮೇಳನಕ್ಕೆ ದಯಮಾಡಿ ಹೋಗಬೇಕೆಂದು ನಿವೇದಿಸಿಕೊಳ್ಳುತ್ತಿದ್ದರು.

ಅಂದು ಶಿವರಾತ್ರಿ, ಸ್ವಾಮೀಜಿಯವರು ಉಪವಾಸ ಹಾಗೂ ಮೌನವ್ರತವನ್ನು ಕೈಗೊಂಡಿದ್ದರು. ಶಿವನ ಧ್ಯಾನದಲ್ಲಿ, ಸಮಾಧಿಯಲ್ಲಿ ಇಡೀ ದಿವಸ ಸ್ವಾಮೀಜಿ ಮುಳುಗಿದ್ದರು. ಮಾರನೇ ದಿವಸ ಅವರ ಗುರುದೇವರಿಂದ ವಿಶ್ವಧರ್ಮ ಸಮ್ಮೇಳನಕ್ಕೆ ಹೋಗಲು ಆಜ್ಞೆಯಾಗಿದೆ ಎಂದು ತಿಳಿಸಿದರು. ಶ್ರೀಮಾತೆ ಶಾರದಾದೇವಿಯವರಿಗೆ ಬರೆದ ಪತ್ರಕ್ಕೂ ಅನುಮತಿಯ ಪ್ರತ್ಯುತ್ತರ ಬಂದಿತು. ಇದನ್ನು ತಿಳಿದ ಅಳಸಿಂಗರ ಆನಂದಕ್ಕೆ ಪಾರವೇ ಇರಲಿಲ್ಲ.

ಆದರೆ ಈಗ ಹಣದ ಸಮಸ್ಯೆ. ಸ್ಥಳೀಯ ಜಮೀನ್ದಾರನೊಬ್ಬನು ಪ್ರಯಾಣಕ್ಕೆ ಬೇಕಾಗುವ ಸಂಪೂರ್ಣ ಹಣವನ್ನು ತಾನು ಕೊಡುತ್ತೇನೆ ಎಂದು ಮಾತು ಕೊಟ್ಟಿದ್ದ. ಕೆಲವರು ಆ ಜಮೀನ್ದಾರನ ಕಿವಿ ಊದಿದರು. ಆದ್ದರಿಂದ ಸರಿಯಾದ ಸಮಯದಲ್ಲಿ ಜಮೀನ್ದಾರನು ತನ್ನ ಮಾತಿನಿಂದ ಹಿಂದೆ ಸರಿದ. ಆದರೂ ಅಳಸಿಂಗರು ಧೃತಿಗೆಡಲಿಲ್ಲ. ಮಾತುಕೊಟ್ಟಿದ್ದಂತೆ ಮೈಸೂರಿನ ಮಹಾರಾಜರು ಹಾಗೂ ರಾಮನಾಡಿನ ಮಹಾರಾಜರು ತಲಾ

೫೦೦ ರೂಪಾಯಿಗಳನ್ನು ನೀಡಿದರು. ಪರಿಚಯವಿರುವ ವ್ಯಕ್ತಿಗಳ ಬಳಿ ಹಾಗೂ ಮನೆಯಿಂದ ಮನೆಗೆ ಹೋಗಿ ದೇಣಿಗೆಯನ್ನು ಅಳಸಿಂಗರು ಸಂಗ್ರಹ ಮಾಡಿದರು.

ಸುಮಾರು ೧೨೬ ವರ್ಷಗಳ ಹಿಂದೆ, ಅಂದಿನ ಕಾಲದಲ್ಲಿ, ಮೂರು ದಿವಸಗಳಲ್ಲೇ ಅಳಸಿಂಗರು ೩,೦೦೦ ರೂಪಾಯಿಗಳನ್ನು ಸಂಗ್ರಹ ಮಾಡಿದರು. ಅವರ ಪ್ರಾಮಾಣಿಕತೆ, ನಿಷ್ಠೆಗಳನ್ನು ನಾವು ಇದರಿಂದ ತಿಳಿದುಕೊಳ್ಳಬಹುದು. ಅವರು ಒಬ್ಬ ಆದರ್ಶ ಕರ್ಮಯೋಗಿ. ಹೀಗೆ ಸ್ವಾಮೀಜಿ ವಿಶ್ವಧರ್ಮ ಸಮ್ಮೇಳನಕ್ಕೆ ಹೋಗಲು ಅವರು ಪ್ರಮುಖ ಕಾರಣೀಭೂತರಾದರು.

ಸ್ವಾಮೀಜಿ ಚಿಕಾಗೋ ಸಮ್ಮೇಳನಕ್ಕೆ ಹೋದ ಮೇಲೆ, ಅಲ್ಲಿ ಹಣದ ಅಭಾವ ತೀವ್ರವಾಗಿ ಉಂಟಾಯಿತು. ಸ್ವಾಮೀಜಿಗೆ ಭಾರತದಲ್ಲಿ ಅನೇಕ ಶಿಷ್ಯರಿದ್ದರೂ, ಅವರು ಮರುಯೋಚಿಸದೆ ಅಳಸಿಂಗರಿಗೆ ತಮ್ಮ ಪರಿಸ್ಥಿತಿಯನ್ನು ಪತ್ರದ ಮೂಲಕ ತಿಳಿಸಿದರು. ಅಳಸಿಂಗರ ಬಳಿ ಹಣವಿರಲಿಲ್ಲ. ತಕ್ಷಣವೇ ೧೦೦೦ ರೂಪಾಯಿ ಸಾಲ ಮಾಡಿ ಸ್ವಾಮೀಜಿಗೆ ಕಳುಹಿಸಿಯೇ ಬಿಟ್ಟರು. ಅವರ ಹೆಂಡತಿಯ ಆಭರಣಗಳನ್ನು ಒತ್ತೆಯಿಟ್ಟರು.

ನಾಲ್ಕು ವರ್ಷಗಳ ತರುವಾಯ ಸ್ವಾಮೀಜಿ ಭಾರತಕ್ಕೆ ಕೆಲವು ಪಾಶ್ಚಾತ್ಯ ಶಿಷ್ಯರೊಂದಿಗೆ ಹಿಂದಿರುಗಿದರು. ಪಾಶ್ಚಾತ್ಯ ಶಿಷ್ಯರು ಅಳಸಿಂಗರ ತ್ಯಾಗ, ಸೇವೆ, ವಿಶೇಷವಾಗಿ ಸ್ವಾಮೀಜಿಗೆ ನೀಡಿದ ನೆರವಿನ ಬಗ್ಗೆ ತಿಳಿದಿದ್ದರು. ಅವರಲ್ಲಿ ಕೆಲವರು ಸುಮಾರು ೧,೦೦,೦೦೦ ರೂಪಾಯಿಗಳನ್ನು ಅಳಸಿಂಗರಿಗೆ ನೀಡುವ ಆಶಯವನ್ನು ವ್ಯಕ್ತಪಡಿಸಿದರು. ಆದರೆ ಅಳಸಿಂಗರು, ಬಡತನದಿಂದ ಬಳಲುತ್ತಿದ್ದರೂ, ವಿನಯವಾಗಿ ಹಣವನ್ನು ನಿರಾಕರಿಸಿದರು. ಇದು ಅವರ ಸ್ವತಂತ್ರ ಮನೋಭಾವವನ್ನು ಸೂಚಿಸುತ್ತದೆ. 'ನಮ್ಮ ಗುರುಗಳ ಹಾಗೂ ಮಾತೃಭೂಮಿಯ ಸೇವೆ ನನ್ನ ಆದ್ಯ ಕರ್ತವ್ಯ. ಅದಕ್ಕೆ ಪ್ರತಿರೂಪವಾಗಿ ಹಣವನ್ನು ನಾನು ಪಡೆದರೆ ನನಗಿಂತ ನೀಚನು ಇನ್ನು ಯಾರು ಇರಲು ಸಾಧ್ಯ?' ಎಂಬುದು ಅವರ ಆಲೋಚನೆ. ಪ್ರತಿ ಕ್ಷಣ ಸಮಾಜಕ್ಕೆ ಹಾಗು ದೇಶಕ್ಕೆ ತನ್ನಿಂದ ಏನು ಕೊಡಲು ಸಾಧ್ಯ, ಯಾವ ಸೇವೆಯನ್ನು ತಾನು ಮಾಡಬಹುದು ಎಂದು ಆಲೋಚಿಸುತ್ತಿದ್ದರೇ ಹೊರತು, ತಮಗಾಗಿ ಒಮ್ಮೆಯೂ ಆಲೋಚಿಸಲಿಲ್ಲ.

## ಮುದ್ರಣ ಮಾಧ್ಯಮ

ಅಂದಿನ ಭಾರತದಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹಾಗೂ ವಿಷಯಗಳನ್ನು ಜನರಿಗೆ ತಲುಪಿಸಲು ಮುದ್ರಣ ಮಾಧ್ಯಮವೇ ಪ್ರಮುಖವಾದ ಮಾಧ್ಯಮವಾಗಿತ್ತು. ಸ್ವಾಮಿ ವಿವೇಕಾನಂದರ ಆಣತಿ ಹಾಗೂ ಆಶಯದಂತೆ, ಅಳಸಿಂಗರು ೧೮೯೫ ಸೆಪ್ಟೆಂಬರ್ ೧೪ ರಂದು 'ಬ್ರಹ್ಮವಾದಿನ್' ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಆದರೆ ವಿನಯಶೀಲರಾದ ಅಳಸಿಂಗರು ತಾವು ಸಂಪಾದಕರೆಂದು ಪತ್ರಿಕೆಯಲ್ಲಿ ಎಲ್ಲೂ ಮುದ್ರಿಸಲಿಲ್ಲ. 'ಬ್ರಹ್ಮವಾದಿನ್' ಮಾಸಪತ್ರಿಕೆಯು ಪ್ರಾರಂಭವಾದ ವಿಷಯವನ್ನು ತಿಳಿದ ಸ್ವಾಮೀಜಿ ಪಾಶ್ಚಾತ್ಯ ದೇಶದಿಂದ ಶುಭ ಹಾರೈಕೆಯ ಪತ್ರವನ್ನು ಅಳಸಿಂಗರಿಗೆ ಕಳುಹಿಸಿದರು. ಅದರಲ್ಲಿ, ''ಬ್ರಹ್ಮವಾದಿನ್ ಪತ್ರಿಕೆಯ ಯಶಸ್ಸೇ ನಿನ್ನ ಮುಕ್ತಿಗೆ ಹಾದಿಯೆಂದು ತಿಳಿದು ಕೆಲಸ ಮಾಡು. ಈ ಗುರಿಯತ್ತ ನಿನಗೆ ಸಂಪೂರ್ಣ ಶ್ರದ್ಧೆಯಿರಲಿ. ಈ ಪತ್ರಿಕೆಯೇ ನಿನ್ನ ಇಷ್ಟದೇವತೆಯಾಗಲಿ. ಆಗ ನಿನ್ನ ಧ್ಯೇಯ ಹೇಗೆ ಸಿದ್ಧಿಯಾಗುತ್ತದೆಂಬುದು ನಿನಗೆ ಸ್ಪಷ್ಟವಾಗುತ್ತದೆ'' ಎಂದು ಬರೆದಿದ್ದರು. ತನ್ನ ಗುರುಗಳ ಮಾತನ್ನು ಅಳಸಿಂಗರು ಅಕ್ಷರಶಃ ಪಾಲಿಸಿದರು. ಭಾರತೀಯ ಸಂಸ್ಕೃತಿ, ಸನಾತನ ಧರ್ಮ, ಜ್ಞಾನ ಮೀಮಾಂಸೆ, ಮುಂತಾದ ವಿಷಯಗಳನ್ನು ಜನಸಾಮಾನ್ಯರಿಗೆ ತಿಳಿಸುವುದು ಮಾಸಪತ್ರಿಕೆಯ ಉದ್ದೇಶವಾಗಿತ್ತು. ಇದರ ಗುಣಮಟ್ಟದಿಂದ ಅಂದಿನ ಕಾಲದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿತವಾಗುತ್ತಿದ್ದಂತಹ ಆಂಗ್ಲ ಮಾಸಪತ್ರಿಕೆಗಳಲ್ಲಿ 'ಬ್ರಹ್ಮವಾದಿನ್' ಮಾಸಪತ್ರಿಕೆಯು ಪ್ರಥಮ ದರ್ಜೆಯ ಮಾಸಪತ್ರಿಕೆಯಾಗಿತ್ತು. ಪತ್ರಿಕೆಯು ವೈವಿಧ್ಯಪೂರ್ಣ ಹಾಗು ಜನಾದರಣೀಯವಾಗಿತ್ತು. ಆದರೆ ಇವರ ಬಳಿ ಹಣವಿರಲಿಲ್ಲ. ಆದರೂ ಬಹಳ ಕಷ್ಟಪಟ್ಟು ಹಲವು ವರ್ಷಗಳ ಕಾಲ ಮಾಸಪತ್ರಿಕೆಯನ್ನು ನಡೆಸಿದರು. ಕೆಲವು ಸ್ವಾಮಿಗಳು, ಧರ್ಮಪಾಲ, ಕರ್ನಲ್ ಸ್ಮಾರ್ಟ್ಸ್, ಮ್ಯಾಕ್ಸ್ ಮುಲ್ಲರ್, ಪಾಲ್ ಡಾಯ್ಸನ್, ಬ್ರಜೇಂದ್ರನಾಥ ಸೀಲ್, ಬಾಲಗಂಗಾಧರ್ ತಿಲಕ್, ಜಪಾನಿನ ಕಕಾಸು ಒಕಾಕುರ, ಮುಂತಾದ ಮಹನೀಯರು ಲೇಖನಗಳನ್ನು ಪತ್ರಿಕೆಗೆ ನೀಡುತ್ತಿದ್ದರು. ಅವರ ಮರಣದ ನಂತರ, ತಮ್ಮ ತಂದೆಯ ಆಶಯವನ್ನು ಅರಿತ ಅಳಸಿಂಗರ ಮಕ್ಕಳು ಸುಮಾರು ೫ ವರ್ಷ ಮಾಸಪತ್ರಿಕೆಯನ್ನು ಮುಂದುವರಿಸಿದರು. ೧೯೧೪ರಲ್ಲಿ 'ಬ್ರಹ್ಮವಾದಿನ್' ಮಾಸಪತ್ರಿಕೆಯು ಹಲವಾರು ಅಡಚಣೆಗಳಿಂದ ಅಂತ್ಯಗೊಂಡಿತು.

'ಬ್ರಹ್ಮವಾದಿನ್' ಮಾಸಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ವಿಷಯಗಳು ಹಾಗೂ ಅದರ ಗುಣಮಟ್ಟ ಹಿರಿಯರಿಗೆ ಹಾಗೂ ಶಿಕ್ಷಿತರಿಗೆ ಮಾತ್ರ ಎಟಕುವಂತಿದೆ ಎಂದೆಣಿಸಿದ ಅಳಸಿಂಗರು ಯುವಕರಿಗಾಗಿ ಬೇರೊಂದು ಮಾಸಪತ್ರಿಕೆಯನ್ನು ಪ್ರಾರಂಭ ಮಾಡಬೇಕೆಂದು ಆಲೋಚಿಸಿದರು. 'ಶುಭಸ್ಯ ಶೀಘ್ರಂ' ಎಂಬ ಮಾತಿನಂತೆ 'ಪ್ರಬುದ್ಧ ಭಾರತ' ಎಂಬ ಮಾಸ ಪತ್ರಿಕೆಯನ್ನು ಪ್ರಾರಂಭಿಸಿಯೇಬಿಟ್ಟರು. ಎಂತಹ ಛಲ ಹಾಗು ದೃಢ ಸಂಕಲ್ಪ ಶಕ್ತಿ ಅಳಸಿಂಗರದು!

ಸ್ವಾಮಿ ವಿವೇಕಾನಂದರಿಗೆ ಅಳಸಿಂಗರು ಎದುರಿಸುತ್ತಿದ್ದ ಕಷ್ಟಗಳ ಸರಮಾಲೆಯ ಕುರಿತು ತಿಳಿದಿತ್ತು. ಆದ್ದರಿಂದ, '' 'ಪ್ರಬುದ್ಧ ಭಾರತ' ಮಾಸಪತ್ರಿಕೆಯನ್ನು ಸಂನ್ಯಾಸಿಗಳು ನಡೆಸಲಿ. ನಿನಗೆ ಸ್ವಲ್ಪ ಭಾರ ಕಡಿಮೆಯಾಗುತ್ತದೆ'' ಎಂದರು. ಸ್ವಾಮೀಜಿಯ ಆಣತಿಯಂತೆ, ಹಿಮಾಲಯದ ತಪ್ಪಲಿನಲ್ಲಿರುವ ಮಾಯಾ

ವತಿಯ ಅದ್ವೈತ ಆಶ್ರಮವು 'ಪ್ರಬುದ್ಧ ಭಾರತ' ಮಾಸಪತ್ರಿಕೆಯನ್ನು ಮುದ್ರಿಸುವ ಜವಾಬ್ದಾರಿಯನ್ನು ತೆಗೆದುಕೊಂಡಿತು. ಇಂದಿಗೂ ಅದು ಮುಂದೆ ಸಾಗುತ್ತಿದೆ.

## ಜನಾನುರಾಗಿ

ಅಳಸಿಂಗರು 'ಜನ ಸೇವೆಯೇ ಜನಾರ್ದನನ ಸೇವೆ' ಎಂಬ ವಾಕ್ಯದಲ್ಲಿ ವಿಶ್ವಾಸವನ್ನು ಇಟ್ಟಿದ್ದರು. ಅಲ್ಲದೆ ಅವರ ಗುರುಗಳ ಮಾತಿನಂತೆ ಪ್ರತಿಯೊಬ್ಬ ಜೀವಿಯಲ್ಲೂ ಭಗವಂತನಿದ್ದಾನೆ, ಅವನ ಸೇವೆ ಮಾಡುವುದೇ ನಿಜವಾದ ಶಿವನ ಪೂಜೆ ಎಂಬ ಮಾತನ್ನು ಅಕ್ಷರಶಃ ಪಾಲಿಸುತ್ತಿದ್ದರು. ಆದ್ದರಿಂದ ಅವಕಾಶ ಸಿಕ್ಕಾಗಲೆಲ್ಲ ಇವರು ಜನರ ಸೇವೆ ಮಾಡಲು ಹಿಂಜರಿಯುತ್ತಿರಲಿಲ್ಲ. ಯಾವುದೇ ಸೇವಾ ಅವಕಾಶವನ್ನು ಮಾಡಲು ಮೀನ-ಮೇಷ ಎಣಿಸುತ್ತಿರಲಿಲ್ಲ.

ಅಂದಿನ ಸಮಯದಲ್ಲಿ ಅಸ್ಪೃಶ್ಯತೆ ಭಾರತವನ್ನು ತುಂಬಾ ಕಾಡುತ್ತಿತ್ತು. ಹರಿಜನನೊಬ್ಬನು ತಿರುವಳ್ಳಿಕ್ಕೇಣಿಯ ಶ್ರೀಪಾರ್ಥಸಾರಥಿಯ ದೇವಾಲಯಕ್ಕೆ ಗೋದಾನವನ್ನು ಮಾಡಲೆಂದು ಬಂದನು. ಅದು ಅವನ ಬಹುದಿನದ ಹರಕೆಯಾಗಿತ್ತು. ಆದರೆ ಅವನ ದಾನವನ್ನು ದೇವಸ್ಥಾನದ ಪೂಜಾರಿಗಳು ಸ್ವೀಕರಿಸಲು ಸಿದ್ಧರಿರಲಿಲ್ಲ. ಇದರಿಂದ ಮನನೊಂದು ಅಳಸಿಂಗರ ಬಳಿ ಸಹಾಯಕ್ಕಾಗಿ ಬಂದನು. ಅಳಸಿಂಗರು ಇವನ ಸಮಸ್ಯೆಯನ್ನು ಸಂಪೂರ್ಣ ಆಲಿಸಿದರು. ಅವನ ಭಕ್ತಿ ಹಾಗು ಭಾವುಕತೆಯನ್ನು ಮನಗಂಡರು. ಆದರೆ ಅದೇ ಸಮಯದಲ್ಲಿ ತಾನು ಎಷ್ಟೇ ಹೇಳಿದರೂ ಸಂಪ್ರದಾಯಸ್ಥ ಪೂಜಾರಿಯು ತನ್ನ ಮಾತನ್ನು ಕೇಳುವುದಿಲ್ಲ ಎಂಬ ಕಟುಸತ್ಯ ಅವರಿಗೆ ತಿಳಿದಿತ್ತು. ಅಂತಹ ಸಂದಿಗ್ಧ ಸಮಯದಲ್ಲಿ ಅವರು ಉಪಾಯವನ್ನು ಮಾಡಿದರು.

ಹರಿಜನ ವ್ಯಕ್ತಿಯಿಂದ ಗೋವನ್ನು ಇವರು ದಾನರೂಪದಲ್ಲಿ ಪಡೆದರು. ನಂತರ ಪೂಜಾರಿಗೆ ಅದನ್ನು ದಾನ ಮಾಡಿದರು. ಆಗ ಪೂಜಾರಿ ಅದನ್ನು ಸ್ವೀಕರಿಸಿದನು. ಹರಿಜನ ಭಕ್ತನ ಮನಸ್ಸಿಗೂ ಸಂತೋಷವಾಯಿತು. ಅವನ ಹರಕೆ ತೀರಿತು. ಹೀಗೆ ಅಳಸಿಂಗರು ಯಾರಿಗೂ ಮನಸ್ಸನ್ನು ನೋಯಿಸದೆ ಅನೇಕರಿಗೆ ನೆರವಾಗುತ್ತಿದ್ದರು.

ಇಂತಹ ಮಹಾನ್ ಜೀವ ೧೯೦೯ರ ಮೇ ೧೧ರಂದು ಇಹಲೋಕವನ್ನು ಅಗಲಿ ತನ್ನ ಗುರುದೇವರ ಪಾದ ಸೇರಿತು. ಆಗ ಅವರಿಗೆ ಕೇವಲ ೪೪ ವರ್ಷ.

## ಉಪಸಂಹಾರ

ಸ್ವಾತಂತ್ರ್ಯ ಹೋರಾಟಗಾರರಾದ ಸುಬ್ರಹ್ಮಣ್ಯ ಭಾರತಿಯವರು, ಅಳಸಿಂಗರನ್ನು ಕುರಿತು ತಮ್ಮ ಮನದಾಳದ ಮಾತುಗಳನ್ನು ಹೇಳಿದ್ದಾರೆ:

''ದೇಶಕ್ಕೆ ಸ್ವಾತಂತ್ರ್ಯ ತರಲು ಹೋರಾಡಿದ ವ್ಯಕ್ತಿಗಳಲ್ಲಿ ಎರಡು ರೀತಿ. ಮೊದಲನೆ ರೀತಿಯ ವ್ಯಕ್ತಿಗಳು ವೀರಾವೇಶದಿಂದ ಹೋರಾಡಿ ದೇಶಕ್ಕಾಗಿ ಪ್ರಾಣ ತೆತ್ತರು. ಎರಡನೆಯ ರೀತಿಯ ಹೋರಾಟಗಾರರು ಎಲೆಮರೆಯ ಕಾಯಿಯಂತೆ, ಪರದೆಯ ಹಿಂದೆ ಇದ್ದು ಸ್ವಾತಂತ್ರ್ಯಕ್ಕಾಗಿ, ಭಾರತದ ಏಳಿಗೆಗಾಗಿ ಶ್ರಮಿಸಿದವರು. ಅಳಸಿಂಗ ಪೆರುಮಾಳರು ಎರಡನೆಯ ರೀತಿಯ ವ್ಯಕ್ತಿ. ಆ ಮಹಾನ್ ಚೇತನ ಎಳ್ಳಷ್ಟೂ ತಮ್ಮನ್ನು ಕುರಿತು ಚಿಂತಿಸದೆ, ಸೂರ್ಯ ತನ್ನನ್ನು ಸುಟ್ಟುಕೊಳ್ಳುತ್ತಾ ಪ್ರತಿಕ್ಷಣ ನಮಗೆಲ್ಲಾ ಬೆಳಕು ಕೊಡುವಂತೆ, ಪರರ ಹಿತಕ್ಕಾಗಿಯೇ ತಮ್ಮ ಜೀವನವನ್ನು ಸಮರ್ಪಿಸಿಕೊಂಡರು. ಇಂದಿನ ಭಾರತ ನಿರ್ಮಾಣದಲ್ಲಿ ಅವರ ಪಾತ್ರ ಬಹಳ ಇದೆ.''

ಸೋದರಿ ನಿವೇದಿತಾ ಬಳಿ, ಕೆಲವು ಮದ್ರಾಸಿ ಯುವಕರು ತಮಗೆ ಮಾರ್ಗದರ್ಶನ ಮಾಡುವಂತೆ ಕೇಳಿಕೊಂಡಾಗ, ''ಏಕೆ, ನಿಮ್ಮ ಬಳಿಯೇ ಶ್ರೀ ಅಳಸಿಂಗರು ಇರುವರು. ಅವರು ಮಹಾನ್ ದೇಶಭಕ್ತರು. ನಿಮಗೆ ದೇಶದ ನಿರ್ಮಾಣ, ಸಮಾಜ ಸೇವೆಯ ಕುರಿತು ಸಂದೇಹವಿದ್ದರೆ, ಅವರನ್ನು ಸಂಪರ್ಕಿಸಿ. ಅವರು ನನಗಿಂತಲೂ ಉತ್ತಮ ವ್ಯಕ್ತಿ, ಸೂಕ್ತ ವ್ಯಕ್ತಿ'' ಎಂದರು.

ಪರಿವ್ರಾಜಕರಾಗಿ, ಅಜ್ಞಾತ ಸಂನ್ಯಾಸಿಯಾಗಿ ಭಾರತದಲ್ಲಿ ಸಂಚರಿಸುತ್ತಿದ್ದ ಸ್ವಾಮಿ ವಿವೇಕಾನಂದರನ್ನು ಗುರುತಿಸಿ, ವಿಶ್ವಧರ್ಮ ಸಮ್ಮೇಳನಕ್ಕೆ ಹೋಗುವಂತೆ ಮಾಡಿದ ವ್ಯಕ್ತಿಗಳಲ್ಲಿ ಅಳಸಿಂಗರು ಅಗ್ರಸ್ಥಾನವನ್ನು ಪಡೆಯುತ್ತಾರೆ. ಅವರ ಸೇವೆಯಿಂದ ಭಾರತದ ಹಾಗೂ ಸನಾತನ ಧರ್ಮದ ಕೀರ್ತಿ ಪತಾಕೆಯನ್ನು ವಿಶ್ವಮಟ್ಟದಲ್ಲಿ ಉತ್ತುಂಗಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಾಯಿತು.

### ಶ್ರೀ ರಾಮಾನುಜರು

''ಅತ್ಯಂತ ಉದಾತ್ತರೂ ವಿಶಾಲಹೃದಯಿಯೂ ಆಗಿದ್ದ ಶ್ರೀ ರಾಮಾನುಜರು ಮಹಾತ್ಮರಲ್ಲಿ ಉತ್ತಮೋತ್ತಮರು. ಅವರು ತೋರಿಸಿದ ಮಾರ್ಗವು ಸತ್ವದ ಮೇಲೆ ಸ್ಥಾಪಿತವಾದದ್ದು. ರಜಸ್ಸು ತಮಸ್ಸುಗಳನ್ನು ಆಧರಿಸಿರುವವರ ಮಾರ್ಗದಂತೆ ಅಸ್ಥಿರ, ಚಂಚಲವಲ್ಲ; ಶಾಶ್ವತ ಸತ್ಫಲಗಳನ್ನು ಕೊಡುವಂಥದು. ಚಿರಂತನ ಪರಮಾನಂದದಲ್ಲಿ ಭಾಗಿಯಾಗಲು ಹಾತೊರೆಯುವವರೆಲ್ಲರೂ ಭಗವಾನ್ ಶ್ರೀ ರಾಮಾನುಜರಂತಹ ಉದಾತ್ತರು ತುಳಿದ ಹಾದಿಯನ್ನು ಅನುಸರಿಸಬೇಕು. ನಾನ್ಯಃ ಪಂಥಾ ವಿದ್ಯತೇ ಅಯನಾಯ — ಇದಲ್ಲದೆ ಬೇರೆ ದಾರಿಯೇ ಇಲ್ಲ. ಶ್ರೀಮಂತರು, ಬಡವರು, ಪಂಡಿತರು, ಪಾಮರರು, ಉತ್ತಮರು, ಅಧಮರು — ಎಲ್ಲರೂ ಈ ಮಹಾತ್ಮರು ಹಾಕಿಕೊಟ್ಟ ಮಾರ್ಗದಲ್ಲಿ ಅತ್ಯಂತ ಸುಲಭವಾಗಿ ನಡೆಯಬಹುದು, ನಡೆದು ಪುನೀತರಾಗಬಹುದು.''

— *ಸ್ವಾಮಿ ರಾಮಕೃಷ್ಣಾನಂದ*

*(ಶ್ರೀ ರಾಮಾನುಜರ ಜೀವನ ಚರಿತ್ರೆ', ಮುನ್ನುಡಿ, ಪು. ೨)*